**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 25.07.2025

ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ವಕೀಲರಿಂದಃ

ನಿಮ್ಮ ಮುಖ್ಯ ವಿಚಾರಣೆಯಲ್ಲಿ 9 ನೇಪ್ಯಾರದಲ್ಲಿ 2 ನೇ ಪ್ರತಿವಾದಿಯು ಬೆಳಗೋಳ ಗ್ರಾಮದ ಸ್ವಾಮಿ ಎನ್ನುವವರಿಂದ ನಿವೇಶನ ಸಂಖ್ಯೆ 3 ರಲ್ಲಿ ಪೂರ್ವ - ಪಶ್ಚಿಮ 5 ಮೀಟರ್ ಮತ್ತು ದಕ್ಷಿಣೋತ್ತರ 12 ಮೀಟರ್ ಅಳತೆಯ ನಿವೇಶನ ಖರೀದಿಸಿದ್ದರು ಎಂದು ಸುಳ್ಳು ಎಂದು ಬರೆಸಿದ್ದು ಅದಕ್ಕೆ ಸಂಬಂಧಿಸಿದಂತೆ ಯಾವುದಾದರೂ ದಾಖಲೆಗಳನ್ನು ಪರಿಶೀಲಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದು ನಮ್ಮ ಪತ್ರದಲ್ಲಿ ಬರೆದಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪತ್ರ ಅಂದರೆ ಯಾವುದು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮಗೆ ನೋಂದಣಿ ಆಗಿರುವ ಪತ್ರ ಎಂದು ನುಡಿಯುತ್ತಾರೆ.

ನಿಮ್ಮ ಮನೆಯ ಪೂರ್ವ ದಿಕ್ಕಿನಲ್ಲಿ 3 ಅಡಿ ಜಾಗವನ್ನು ಬಿಟ್ಟು 2 ನೇ ಪ್ರತಿವಾದಿಯು ಮನೆ ಕಟ್ಟಿಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಿವೇಶನ ಸಂಖ್ಯೆ 3 ರಲ್ಲಿ ಪೂರ್ವ - ಪಶ್ಚಿಮ 5 ಮೀಟರ್ ಮತ್ತು ದಕ್ಷಿಣೋತ್ತರ 12 ಮೀಟರ್ ಅಳತೆಯ ನಿವೇಶನವನ್ನು 2 ನೇ ಪ್ರತಿವಾದಿಯು ಸ್ವಾಮಿರವರ ಕಡೆಯಿಂದ ಖರೀದಿ ಮಾಡಿ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಖರೀದಿ ಮಾಡಿರುವ ಸ್ವತ್ತನ್ನು ನೀವು ದಾವಾ ಅನುಸೂಚಿ ಸ್ವತ್ತು 2 ರಲ್ಲಿ ಸುಳ್ಳಾಗಿ ತೋರಿಸಿ ಹಾಗೂ ಸುಳ್ಳು ಚೆಕ್ಕು ಬಂದಿಯನ್ನು ಹಾಗೂ ಸುಳ್ಳು ವಿಸ್ತೀರ್ಣವನ್ನು ತೋರಿಸಿರುತ್ತೀರಾ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತು 2 ರಲ್ಲಿ ನಿಮಗೆ ಯಾವುದೇ ಹಕ್ಕು ಯಾ ಹಿತಾಸಕ್ತಿ ಇರದಿದ್ದರೂ ಸಹಾ ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ಸದರಿ ಸ್ವತ್ತನ್ನು ಲಪಾಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯು 1 ನೇ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕಾಲದಲ್ಲೂ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲುಃ **3** ನೇ ಪ್ರತಿವಾದಿ ಪರ ವಕೀಲರಿಂದಃ</u>

3 ನೇ ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರವನ್ನು ದಾಖಲು ಮಾಡದೆ ಇದುದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.